## ನಿಮ್ಮೊಡನೆ

# ಗಂಡು-ಹೆಣ್ಣಿನ ಸಮಾನತೆಯ ಪಾಠ ಮನೆಯಿಂದಲೇ ಆರಂಭವಾಗಲಿ

ಆಂಧ್ರಪ್ರದೇಶದ ನಲ್ಗೊಂಡ ಜಿಲ್ಲೆಯ 8ನೇ ತರಗತಿಯ ಬಾಲಕನೊಬ್ಬ ಶಾಲಾ ಚುನಾವಣೆಯಲ್ಲಿ ವಿದ್ಯಾರ್ಥಿನಿಯ ಎದುರು ಸೋತಿದ್ದಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. 'ಹುಡುಗಿಯ ಎದುರು ಸ್ಪರ್ಧೆಯಲ್ಲಿ ಸೋತೆ' ಎಂದು ಗೆಳೆಯರು ಕಿಚಾಯಿಸಿದ್ದರಿಂದ ನೊಂದ ಹುಡುಗ, ರೈಲಿಗೆ ತಲೆಕೊಟ್ಟಿದ್ದಾನೆ. ಬಾಲಕನ ದುರ್ಬಲ ಮನಸ್ಥಿತಿಯ ಕಾರಣದಿಂದ ಸಾವು ಸಂಭವಿಸಿದ್ದರೂ, ಆ ದುರ್ಘಟನೆಯ ಹಿಂದೆ ಕೆಲಸ ಮಾಡಿರಬಹುದಾದ ಸಮಾಜದ ಮಾನಸಿಕ ಧೋರಣೆಯೊಂದನ್ನು ಗುರ್ತಿಸಬೇಕಾಗಿದೆ; ಅದು ಹೆಣ್ಣಿನ ಎದುರು ಸೋಲುವುದು ಅವಮಾನಕರ ಎನ್ನುವ ಗಂಡಿನ ಮನಸ್ಥಿತಿ. 'ಮುಖ್ಯಮಂತ್ರಿ ಮಗನೇ ಹೆಣ್ಣುಮಗಳ ವಿರುದ್ಧ ಸೋತಿದ್ದಾನೆ' ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಸುಮಲತಾ ಅವರೆದುರು ನಿಖಿಲ್ ಕುಮಾರಸ್ವಾಮಿ ಸೋಲಿಗೆ ಪ್ರತಿಪಕ್ಷದ ನಾಯಕರ ಉದ್ಗಾರದಲ್ಲೂ ಇಂತಹುದೇ ಮನಸ್ಥಿತಿಯಿತ್ತು. ಸೋಲಿಗಿಂತಲೂ, ಯಾರ ವಿರುದ್ಧ ಸೋತೆ ಎನ್ನುವುದೇ ಮುಖ್ಯವಾಗುವಂತಹದ ಭಾವನೆಯನ್ನು ಎಳೆಯ ಬಾಲಕನಲ್ಲಿ, ಬೆಳೆಯದ ರಾಜಕಾರಣಿಯಲ್ಲಿ ಬಿತ್ತಿದ್ದಾದರೂ ಯಾರು? ಉತ್ತರ ಹುಡುಕುತ್ತಾ ಹೋದರೆ, ಬೆರಳು ನಮ್ಮತ್ತಲೇ ಚಾಚುತ್ತದೆ.

ಮಹಿಳೆಯರ ವಿರುದ್ಧ ಸೋಲುವುದು ಅವಮಾನಕರ ಎನ್ನುವ ಧೋರಣೆ ಇಂದಿನದೇನೂ ಅಲ್ಲ. ಈ ಮನಸ್ಥಿತಿ ಶತಮಾನಗಳಿಂದಲೂ ಸಮಾಜದಲ್ಲಿ ಜೀವಂತವಾಗಿದೆ. ಗಂಡಸರ ಮಾತಿರಲಿ, ಹೆಣ್ಣುಮಕ್ಕಳು ಕೂಡ ಇದನ್ನು ಪೋಷಿಸುತ್ತಾರೆ. ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಲಿಂಗತಾರತಮ್ಯದ ಪ್ರಯೋಗಶಾಲೆಯಾಗಿ ಮನೆಯೇ ಬಳಕೆಯಾಗುತ್ತದೆ, ಮಕ್ಕಳೇ ಪಾತ್ರಗಳಾಗುತ್ತಾರೆ. 'ಹುಡುಗಿಯಾಗಿ ಅವಳು ಮಾಡಿದ್ದನ್ನು ಹುಡುಗನಾಗಿ ಮಾಡಲಿಕ್ಕೆ ನಿನಗೇನು ಕಷ್ಟ?' ಎಂದು ಅಮ್ಮಂದಿರು ತಮ್ಮ ಗಂಡುಮಕ್ಕಳನ್ನು ಹೀಗಳೆಯುವುದಿದೆ. ಇಂಥ ಮಾತುಗಳ ಕಾರಣದಿಂದಲೇ, ನಾವು ಹುಡುಗಿಯರಿಗಿಂತಲೂ ದೈಹಿಕವಾಗಿ–ಮಾನಸಿಕವಾಗಿ ಬಲಿಷ್ಠರು ಎಂದು ಹುಡುಗರು ನಂಬಿಬಿಡುತ್ತಾರೆ; ಹೆಣ್ಣಿನ ವಿರುದ್ಧ ಸೋಲುವುದು ತಮ್ಮ 'ಗಂಡಸ್ತನ'ಕ್ಕೆ ಅವಮಾನ ಎನ್ನುವ ಭ್ರಮೆಯನ್ನು ಬೆಳೆಸಿಕೊಳ್ಳುತ್ತಾರೆ.

'ಹುಡುಗಿಯಾಗಿ ಅವಳು ಮಾಡಿದ್ದನ್ನು ಹುಡುಗನಾಗಿ ಮಾಡಲಿಕ್ಕೆ ನಿನಗೇನು ಕಷ್ಟ?' ಎಂದು ಅಮ್ಮಂದಿರು ತಮ್ಮ ಗಂಡುಮಕ್ಕಳನ್ನು ಹೀಗಳೆಯುವುದಿದೆ. ಇಂಥ ಮಾತುಗಳಿಂದಲೇ, ಹುಡುಗಿಯರಿಗಿಂತಲೂ ದೈಹಿಕವಾಗಿ–ಮಾನಸಿಕವಾಗಿ ನಾವು ಬಲಿಷ್ಠರು ಎನ್ನುವ ಭ್ರಮೆಗೆ ಹುಡುಗರು ಒಳಗಾಗುತ್ತಾರೆ.

ಗಂಡಸ್ತನದ ಮೇಲರಿಮೆ ಬಹುತೇಕ ಸಂದರ್ಭಗಳಲ್ಲಿ ಮದುವೆಯ ನಂತರವೂ ಮುಂದುವರಿಯುತ್ತದೆ. ತನ್ನ ಪತ್ನಿ ತನಗಿಂತ ಹೆಚ್ಚು ಓದಿದವಳಾದರೆ ಅಥವಾ ಉನ್ನತ ಹುದ್ದೆಯಲ್ಲಿದ್ದರೆ ಗಂಡನ ಮನಸ್ಸಿಗೆ ಕಿರಿಕಿರಿ, ಆ ಸಂಸಾರದಲ್ಲಿ ಅಪಸ್ವರ. ಮೇಲಧಿಕಾರಿ ಹೆಣ್ಣಾಗಿದ್ದರಂತೂ ಆಕೆಯ ಕೆಳಗೆ ಕೆಲಸ ಮಾಡುವ ಹೆಚ್ಚಿನ ಗಂಡಸರು ಅಸಹನೆಯಿಂದ ಚಡಪಡಿಸುತ್ತಿರುತ್ತಾರೆ. ವಿದ್ಯೆ–ಹುದ್ದೆಯ ಮಾತಿರಲಿ, ಸಂಗಾತಿಯ ಎತ್ತರ ಕೂಡ ತನಗಿಂತ ಕಡಿಮೆಯಾಗಿರಬೇಕು ಎಂದು ಅಪೇಕ್ಷಿಸುವವರಿದ್ದಾರೆ. ಹೆಣ್ಣು ತನ್ನ ಅಧೀನಳಾಗಿರುವುದು ದಾಂಪತ್ಯದ ಯಶಸ್ಸಿನ ಸೂತ್ರಗಳಲ್ಲೊಂದು ಎಂದು ಭಾವಿಸುವ ಗಂಡಸರು ಇದ್ದಾರೆ. ತನ್ನಂತೆಯೇ ಹೊರಗೆ ದುಡಿಯುವ ಹೆಂಡತಿಯ ಮೇಲೆ, ಮನೆಯ ಎಲ್ಲ ಕೆಲಸವನ್ನು ಹೊರಿಸುವ ಮಹಾನುಭಾವರೂ ಇದ್ದಾರೆ. ಮನೆಯ ಕೆಲಸದಲ್ಲಿ ಹೆಂಡತಿಗೆ ನೆರವಾದರೆ ಅವರ ಗಂಡಸ್ತನಕ್ಕೆ ಧಕ್ಕೆಯಾಗುತ್ತದೆ. ವಿಪರ್ಯಾಸವೆಂದರೆ, ಪತ್ನಿಯಾಗಿ ಇಂಥ ಶೋಷಣೆಗೆ ಒಳಗಾಗುವ ಹೆಣ್ಣು, ಅತ್ತೆಯಾದ ನಂತರ ತನ್ನ ಸೊಸೆಯಾದವಳು ಮಗನ ಅಧೀನದಲ್ಲಿರಬೇಕೆಂದು ನಿರೀಕ್ಷಿಸುವುದು.

ಕೆಲವು ಸಂದರ್ಭಗಳಲ್ಲಿ 'ಗಂಡು' ಮೇಲೆನ್ನುವ ಭಾವನೆ ಆಕ್ರಮಣಕಾರಿ ಆಗುವುದಿದೆ. ಹೆಣ್ಣು ತನ್ನ ಬಳಕೆಯ ವಸ್ತು ಎಂದು ಭಾವಿಸುವವರು ಸಮಾಜಕ್ಕೆ ಅಪಾಯಕಾರಿ. ಅಂಥವರ ಸಂಖ್ಯೆಯೇ ಹೆಣ್ಣಿನ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳಲ್ಲಿ ಹೆಚ್ಚಾಗಿರುತ್ತದೆ. ಈ ತಾರತಮ್ಯ ಧೋರಣೆ ರಾಜಕಾರಣದಲ್ಲೂ ಇದೆ. ಅನಿವಾರ್ಯ ಸಂದರ್ಭಗಳಲ್ಲಿ ಮಹಿಳೆಯರು ಚುನಾವಣೆಗೆ ನಿಂತು ಆರಿಸಿಬಂದರೂ, ಅಧಿಕಾರ ಚಲಾವಣೆಯ ಸೂತ್ರಗಳು ಗಂಡ, ಅಣ್ಣ ಅಥವಾ ಅಪ್ಪನ ಮುಷ್ಟಿಯಲ್ಲಿಯೇ ಇರುತ್ತವೆ. ಶಾಸನಸಭೆಗಳಲ್ಲಿ ಹಾಗೂ ಮಂತ್ರಿಮಂಡಲಗಳಲ್ಲಿನ ಮಹಿಳಾ ಪ್ರಾತಿನಿಧ್ಯ, ಸಮಾಜದಲ್ಲಿನ ಲಿಂಗತಾರತಮ್ಯಕ್ಕೆ ಹಿಡಿದ ಕನ್ನಡಿಯೇ ಆಗಿದೆ.

ಗಂಡಿಗಿಂತ ಹೆಣ್ಣು ಕನಿಷ್ಠ ಎನ್ನುವ ಮಾನಸಿಕ ರೋಗಕ್ಕೆ ಮದ್ದು ಮನೆಯಲ್ಲೇ ಇದೆ. ಗಂಡು–ಹೆಣ್ಣು ಇಬ್ಬರೂ ಸಮಾನರು ಎನ್ನುವ ಭಾವನೆಯನ್ನು ಬಾಲ್ಯದಿಂದಲೂ ಮಕ್ಕಳ ಮನಸ್ಸಿಗೆ ತುಂಬುವುದು ಪೋಷಕರ ಕರ್ತವ್ಯವಾಗಿದೆ. ಮಗನಿಗಿಂತಲೂ ಮಗಳನ್ನು ಹೆಚ್ಚು ನಿಯಂತ್ರಣಕ್ಕೆ ಒಳಪಡಿಸುವುದು ಎಳೆಯ ಮನಸ್ಸುಗಳಲ್ಲಿ ಮೇಲುಕೀಳಿನ ಭಾವನೆ ಉಂಟುಮಾಡುತ್ತದೆ. ಪ್ರಸಕ್ತ ಸಂದರ್ಭವಂತೂ ಹೆಣ್ಣುಮಕ್ಕಳಿಗಿಂತಲೂ ಹೆಚ್ಚಿನ ನಿಯಂತ್ರಣವನ್ನು ಬಾಲಕರ ಮೇಲೆಯೇ ಹೇರಲು ಒತ್ತಾಯಿಸುವಂತಿದೆ. ಮಹಿಳೆಯರ ಬಗೆಗೆ ಸಮಾಜ ಹೊಂದಿರುವ ಗೌರವದ ಬಹುತೇಕ ಪರಿಕಲ್ಪನೆಗಳು ಆಳದಲ್ಲಿ ಹುಸಿಯಾಗಿರುತ್ತವೆ. ಹೆಣ್ಣಾಗಿರುವ ಕಾರಣಕ್ಕಾಗಿ ಗೌರವಿಸಬೇಕು ಎನ್ನುವ ಭಾವನೆಯೇ ಠಕ್ಕು, ಪೊಳ್ಳುತನದಿಂದ ಕೂಡಿರುವಂತಹದ್ದು. ಹೆಣ್ಣನ್ನು ಓರ್ವ ಸಹವ್ಯಕ್ತಿಯಾಗಿ ಭಾವಿಸುವುದು, ಆಕೆಯ ವ್ಯಕ್ತಿತ್ವವನ್ನು ಗೌರವಿಸುವ ಮನೋಭಾವ ಇಂದಿನ ಅಗತ್ಯ. ಹೀಗೆ ಪರಸ್ಪರ ಗೌರವಿಸುವುದು ಸಮಾನತೆಯ ರಹದಾರಿ ಹಾಗೂ ಕೌಟುಂಬಿಕ ನೆಮ್ಮದಿಗೂ ಪೂರಕ.

■ ರಘುನಾಥ ಚ.ಹ.

